# 1 ನೇ ಹೆಚ್ಚುವರಿ ಸತ್ರ ಮತ್ತು ವಿಶೇಷ ನ್ಯಾಯಾಲಯ, ಚಿಕ್ಕಮಗಳೂರು

## ಸ್ಪೆಷಲ್ ಮೊಕದ್ದಮೆ ನಂಃ 153/2019

ಸಾಕ್ಷಿದಾರರ ಹೆಸರು - ವಾಸಂತಿ ಪಿಡಬ್ಲ್ಯೂ- 01

ಗಂಡನ ಹೆಸರು - ಕುಮಾರ ಸಿಡಬ್ಲ್ಯೂ -06

ವಯಸ್ಸು - 45 ವರ್ಷ

ಉದ್ಯೋಗ - ಚಿಕ್ಕನ್ ಅಂಗಡಿ

ವಾಸ ಸ್ಥಳ - ಸಖರಾಯಪಟ್ಟಣ

ದಿನಾಂಕಃ 06-01-2026 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ-

**1.** ನ್ಯಾಯಾಲಯದಲ್ಲಿ ಹಾಜರಿರುವ 2 ಮತ್ತು 3 ನೇ ಆರೋಪಿತರು ಯಾರೆಂದು ನನಗೆ ಗೊತ್ತಿಲ್ಲ. ಚಾಸಾ.1 ನನ್ನ ಬಾವ. ಚಾಸಾ.9 ರವರು ಚಾಸಾ.1 ರವರ ಹೆಂಡತಿ. ಚಾಸಾ.10 ರವರು ಚಾಸಾ.1 ಮತ್ತು 9 ರವರ ಮಗ. ಸಹಪಂಚರಾದ ಚಾಸಾ.2 ಮತ್ತು 3 ನನಗೆ ಗೊತ್ತಿಲ್ಲ.

2. ಆರೋಪಿಯಿಂದ ಚಾಸಾ.1 ರವರಿಗೆ ಏನು ತೊಂದರೆಯಾಗಿದೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ನನ್ನನ್ನು ವಿಚಾರಿಸಿಲ್ಲ ಮತ್ತು ನಾನು ಅವರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ.

**3.** ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಯು ದಿಃ 23-07-2019 ರಂದು ಸಾಕ್ಷಿಯು ತೋರಿಸಿದ

ಸ್ಥಳದಲ್ಲಿ ಪೊಲೀಸರು ಜರುಗಿಸಿದ್ದಾರೆ ಎಂದು ಹೇಳಲಾದ ಪಂಚನಾಮೆಯಾಗಿದ್ದು, ಅದನ್ನು ನಿಪಿ.1 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಪೊಲೀಸರು ಹೇಳಿದ ಮೇರೆಗೆ ಸದರಿ ಸಹಿಯನ್ನು ಮಾಡಿದ್ದೇನೆ. ಆದರೆ ಯಾವ ವಿಚಾರಕ್ಕೆ ಎಂದು ನನಗೆ ಗೊತ್ತಿಲ್ಲ. ಸದರಿ ದಾಖಲೆಯಲ್ಲಿರುವ ವಿಚಾರಗಳು ನನಗೆ ಗೊತ್ತಿಲ್ಲ. ಪೊಲೀಸರು ಅದನ್ನು ನನಗೆ ಓದಿ ಹೇಳಿಲ್ಲ. ನಾನು ಪೊಲೀಸರಿಗೆ ಯಾವುದೇ ಸ್ಥಳವನ್ನು ತೋರಿಸಿಲ್ಲ ಮತ್ತು ಏನನ್ನು ಹಾಜರು ಪಡಿಸಿಲ್ಲ ಮತ್ತು ಅವರು ನನ್ನ ಸಮಕ್ಷಮ ಪಂಚನಾಮೆ ಜರುಗಿಸಿ ಅದನ್ನು ಅಮಾನತು ಪಡಿಸಿಕೊಂಡಿಲ್ಲ.

4. ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಲಾಗಿ ಅದರಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಫೋಟೋವನ್ನು ನಿಪಿ.2 ಎಂದು ಗುರುತಿಸಲಾಯಿತು. ಪೊಲೀಸರು ಹೇಳಿದ ಮೇರೆಗೆ ಸದರಿ ಫೋಟೋಗೆ ನಿಂತುಕೊಂಡಿದ್ದೇನೆ. ಆದರೆ ಸದರಿ ಫೋಟೋವನ್ನು ಯಾವ ವಿಚಾರಕ್ಕೆ ತೆಗೆದುಕೊಳ್ಳಲಾಗಿದೆ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ-

5. ನನ್ನ ಗಂಡನಾದ ಕುಮಾರ್ ರವರ ಮನೆಯ ಬಳಿ ಚಂದನ್

ಚಿಕ್ಕನ್ ಸೆಂಟರ್ ಅಂಗಡಿಯನ್ನು ಇಟ್ಟುಕೊಂಡು ಕೋಳಿ ವ್ಯಾಪಾರ ಮಾಡಿಕೊಂಡಿದ್ದೇನೆ ಎಂದರೆ ಸರಿ. ನನ್ನ ಗಂಡನ ಅಣ್ಣನಾದ ಚಾಸಾ.1 ಮತ್ತು ಅವರ ಹೆಂಡತಿಯಾದ ಚಾಸಾ.9 ರವರು ಸಖರಾಯಪಟ್ಟಣದ ಪೀಳ್ಳೇನಹಳ್ಳಿಗೆ ಹೋಗುವ ರಸ್ತೆಯ ಬಳಿ ವಾಸವಾಗಿರುವ 3 ನೇ ಆರೋಪಿಯಾದ ನಾಗರಾಜ್ ರವರ ಬಳಿ ಹಿಂದೆ ಅಡಿಕೆ ಸುಲಿಯುವ ಕೆಲಸಕ್ಕೆ ಹೋಗುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಅವರು ಕೆಲಸಕ್ಕೆ ಹೋಗುವಾಗ 3 ನೇ ಆರೋಪಿಯ ಬಳಿ ಕಷ್ಟಕ್ಕೆಂದು ಸಾಲವಾಗಿ ಆಗಾಗ್ಗೆ 2 ಸಾವಿರ, 5 ಸಾವಿರ ರೂಪಾಯಿಗಳನ್ನು ಪಡೆದುಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಅದರ ಅಸಲು ಬಡ್ಡಿ ಸೇರಿ ಒಟ್ಟು ರೂ.3,00,000/- ಆಗಿದೆ ಎಂದು 3 ನೇ ಆರೋಪಿ ಹೇಳಿ ಅದನ್ನು ವಾಪಸ್ ಕೊಡುವಂತೆ ಆಗಾಗ್ಗೆ ಚಾಸಾ.1 ಮತ್ತು 9 ರವರನ್ನು ಕೇಳುತ್ತಿದ್ದರಿಂದ ಅವರು ಬೇಸರ ಮಾಡಿಕೊಂಡು 3 ನೇ ಆರೋಪಿಯ ಬಳಿ ಕೆಲಸಕ್ಕೆ ಹೋಗುವುದನ್ನು ಬಿಟ್ಟಿದ್ದರು ಎಂದರೆ ಸರಿಯಲ್ಲ. ಹಣಕಾಸಿನ ವಿಚಾರವಾಗಿ 3 ನೇ ಆರೋಪಿ ಆಗಾಗ್ಗೆ ಅವರ ಮನೆ ಬಳಿ ಹೋಗಿ ಅಸಲು ಮತ್ತು ಬಡ್ಡಿ ಹಣವನ್ನು ನೀಡುವಂತೆ ಪೀಡಿಸುತ್ತಿದ್ದನು ಎಂದರೆ ಸರಿಯಲ್ಲ.

6. ಆ ವಿಚಾರವಾಗಿ ಮೀನು ವ್ಯಾಪಾರಿ ಜಯರಾಮರವರು ತೀರ್ಮಾನ ಮಾಡಿದಂತೆ ಚಾಸಾ.1 ರವರು ಒಂದು ಸೈಟ್ ಮಾರಿ ಬಂದಿದ್ದ ಹಣದ ಪೈಕಿ ರೂ.1,55,000/- ಗಳನ್ನು 3 ನೇ ಆರೋಪಿಗೆ ಕೊಟ್ಟಿದ್ದರು ಎಂದರೆ ಸರಿಯಲ್ಲ. ಆದರೂ ಸಹ 3 ನೇ ಆರೋಪಿ ಆಗಾಗ್ಗೆ ಅವರ ಮನೆ ಬಳಿ ಹೋಗಿ ಬಡ್ಡಿ ಹಣ

ನೀಡುವಂತೆ ಪೀಡಿಸಿ ಹಣ ಕೊಡದಿದ್ದರೆ ಮುಂದೆ ಒಂದು ದಿನ ನಿಮಗೆ ಗತಿ ಕಾಣಿಸುತ್ತೇನೆ ಎಂದು ಹೇಳಿ ಹೋಗಿದ್ದನು ಎನ್ನುವ ವಿಚಾರ ನನಗೆ ತಿಳಿದಿತ್ತು ಎಂದರೆ ಸರಿಯಲ್ಲ.

7. ದಿಃ 22-07-2019 ರಂದು ಬೆಳಿಗ್ಗೆ 11.30 ಗಂಟೆಗೆ ನನ್ನ ಗಂಡ ಕುಮಾರ್ ರವರು ಮೀನು ತರುವುದಾಗಿ ಹೇಳಿ ನಾಗೇನಹಳ್ಳಿಗೆ ಹೋದಾಗ ನಾನು ಕೋಳಿ ಅಂಗಡಿಯನ್ನು ನೋಡಿಕೊಂಡಿದ್ದೆನು ಎಂದರೆ ಸರಿಯಲ್ಲ. ಮಧ್ಯಾಹ್ನ 3.30 ಗಂಟೆಗೆ ನಾನು ನಮ್ಮ ಮನೆ ಬಳಿ ಇದ್ದಾಗ ಪಾವನ ವೈನ್ ಸೆಂಟರ್ ಬಳಿ ಗಲಾಟೆಯಾಗುವ ಶಬ್ಧ ಕೇಳಿ ಅಲ್ಲಿಗೆ ಹೋಗಿ ನೋಡಿದಾಗ ಅಲ್ಲಿ ನನ್ನ ಗಂಡನ ತಮ್ಮನಾದ 1 ನೇ ಆರೋಪಿ ಕೃಷ್ಣ ಚಾಸಾ.1 ರವರಿಗೆ ಕತ್ತಿಯಿಂದ ಅವರ ತಲೆಯ ಹಿಂಭಾಗ, ಎಡಭುಜ, ಹೊಟ್ಟೆ 2 ಕಾಲಿನ ತೊಡೆಯ ಬಳಿ ಕಡಿಯುತ್ತಿದ್ದನು ಎಂದರೆ ಸರಿಯಲ್ಲ. 1 ನೇ ಆರೋಪಿಯ ಪಕ್ಕದಲ್ಲಿ ನಿಂತಿದ್ದ 2 ನೇ ಆರೋಪಿ ಬಿಡಬೇಡ ಕಡಿದು ಸಾಯಿಸು ಎಂದು ಹೇಳುತ್ತಿದ್ದನು ಎಂದರೆ ಸರಿಯಲ್ಲ.

8. ನಾನು ಕೂಗಾಡುತ್ತಾ ಅಲ್ಲಿಗೆ ಹೋದಾಗ ಚಾಸಾ.7 ರವರು ಅಲ್ಲಿಗೆ ಬಂದಿದ್ದನ್ನು ನೋಡಿದ 1 ನೇ ಆರೋಪಿ ಕತ್ತಿಯನ್ನು ಕೆಳಗೆ ಬಿಸಾಡಿ 1 ಮತ್ತು 2 ನೇ ಆರೋಪಿತರು ಸೇರಿ ಮರಣಾಂತಿಕವಾಗಿ ಗಾಯಗೊಳಿಸಿದ್ದ ಚಾಸಾ.1 ರವರನ್ನು ಕುರಿತು, ಇವತ್ತು ಬದುಕಿ ಬಿಟ್ಟೆ ಇನ್ನೊಂದು ದಿನ ಸಿಕ್ಕು ನಿನ್ನನ್ನು ಕೊಲೆ ಮಾಡದೇ ಬಿಡುವುದಿಲ್ಲ ಎಂದು ಹೇಳಿ ಹೋದರು ಎಂದರೆ ಸರಿಯಲ್ಲ. ಸ್ವಲ್ಪ ಸಮಯಕ್ಕೆ ಚಾಸಾ.9 ಮತ್ತು 10

ರವರು ಅಲ್ಲಿಗೆ ಬಂದರು ಎಂದರೆ ಸರಿಯಲ್ಲ. ಗಾಯಗೊಂಡಿದ್ದ ಚಾಸಾ.1 ರವರನ್ನು ಸಖರಾಯಪಟ್ಟಣ ಆಸ್ಪತ್ರೆಗೆ ತೋರಿಸಿ ಅಲ್ಲಿನ ವೈದ್ಯರ ಸಲಹೆಯಂತೆ ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲು ಮಾಡಿದರು ಎಂದರೆ ಸರಿಯಲ್ಲ. ಚಾಸಾ.1 ರವರು ಸದರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ಆರೋಪಿತರ ವಿರುದ್ಧ ಪೊಲೀಸರಿಗೆ ದೂರು ಕೊಟ್ಟ ವಿಚಾರ ತಿಳಿಯಿತು ಎಂದರೆ ಸರಿಯಲ್ಲ.

**9.** ದಿಃ 23-07-2019 ರಂದು ನಾನು ಪೊಲೀಸರಿಗೆ ಮೇಲೆ ಹೇಳಿದಂತೆ ಆರೋಪಿತರು ಕೃತ್ಯವೆಸಗಿದ್ದ ಸ್ಥಳವನ್ನು ಚಾಸಾ.2 ಮತ್ತು 3 ರವರ ಸಮಕ್ಷಮ ತೋರಿಸಿದ್ದೇನೆ ಎಂದರೆ ಸರಿಯಲ್ಲ. ಸದರಿ ಸ್ಥಳದಲ್ಲಿ ಪೊಲೀಸರು ಮೇಲೆ ಹೇಳಿದ ಪಂಚರ ಸಮಕ್ಷಮ ನಿಪಿ.2 ರಂತೆ ಮಧ್ಯಾಹ್ನ 1 ಗಂಟೆಯಿಂದ 2 ಗಂಟೆಯವರೆಗೆ ಪಂಚನಾಮೆಯನ್ನು ಜರುಗಿಸಿ ಅದಕ್ಕೆ ನನ್ನ ಮತ್ತು ಪಂಚರ ಸಹಿಗಳನ್ನು ಪಡೆದಿದ್ದಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಆರೋಪಿತರು ಕೃತ್ಯಕ್ಕೆ ಬಳಸಿದ್ದ ಒಂದು ಕತ್ತಿಯನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಪೊಲೀಸರು ನಿಪಿ.3 ರಂತೆ ಫೋಟೋವನ್ನು ತೆಗೆದಿದ್ದಾರೆ ಎಂದರೆ ಸರಿಯಲ್ಲ.

10. ದಿಃ 06-08-2019 ರಂದು ಪೊಲೀಸರು ನನ್ನನ್ನು ವಿಚಾರಿಸಿದ್ದಾರೆ ಎಂದರೆ ಸರಿಯಲ್ಲ. ಆಗ ನಾನು ಅವರಿಗೆ ಮೇಲಿನ ವಿಚಾರಗಳನ್ನು ತಿಳಿಸಿ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಸದರಿ ಹೇಳಿಕೆಯನ್ನು ನಿಪಿ.3 ಎಂದು

ಗುರುತಿಸಲಾಯಿತು.

**11.** ಘಟನೆಯ ಬಗ್ಗೆ ಮಾಹಿತಿ ಇದ್ದು ಆ ಬಗ್ಗೆ ಪೊಲೀಸರಿಗೆ ನಿಪಿ.3 ರಂತೆ ಹೇಳಿಕೆಯನ್ನು ನೀಡಿ ನಿಪಿ.2 ಮಹಜರಿಗೆ ಸಹಕರಿಸಿದ್ದದ್ದರೂ ಸಹ ಈಗ ಆರೋಪಿತರೊಂದಿಗೆ ಶಾಮೀಲಾಗಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಪಾಟೀ ಸವಾಲು: ಆರೋಪಿತರ ಪರ ವಕೀಲರು ಸಾಕ್ಷಿಯ ಪಾಟೀ ಸವಾಲು ಇಲ್ಲವೆಂದು ನುಡಿದಿರುತ್ತಾರೆ.</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ